# ಅಬಕಾರಿಯಲ್ಲಿ 1,709 ಹುದ್ದೆ ಖಾಲಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಆದಾಯ ತಂದುಕೊಡುವಲ್ಲಿ ಮುಂಚೂಣಿಯಲ್ಲಿರುವ ಅಬಕಾರಿ ಇಲಾಖೆಯಲ್ಲಿ 1,709 ವಿವಿಧ ವೃಂದಗಳ ಹುದ್ದೆಗಳು ಖಾಲಿ ಇವೆ.

ಇಲಾಖೆಯಲ್ಲಿ ಇರುವ ಒಟ್ಟು 5,811 ವಿವಿಧ ಹುದ್ದೆಗಳ ಪೈಕಿ 4,102 ಹುದ್ದೆಗಳು ಭರ್ತಿಗೊಂಡಿದ್ದು, 54 ಗ್ರೂಪ್ ಎ, 41 ಗ್ರೂಪ್ ಬಿ, 1,577 ಗ್ರೂಪ್ ಸಿ ಹಾಗೂ 37 ಗ್ರೂಪ್ ಡಿ ಸೇರಿ 1,709 ವಿವಿಧ ವೃಂದದ ಹುದ್ದೆಗಳು ಖಾಲಿ ಉಳಿದಿವೆ. ಅಕ್ರಮವಾಗಿ ಮದ್ಯ ಮಾರಾಟ ಹಾಗೂ ಕಳ್ಳಭಟ್ಟಿ ತಡೆಯಲು ಅಬಕಾರಿ ಇನ್ಸ್ಪೆಕ್ಟರ್, ಅಬಕಾರಿ ಸಬ್ ಇನ್ಸ್ಪೆಕ್ಟರ್, ಮುಖ್ಯ ಹುದ್ದೆ ಹಾಗೂ ಪೇದೆ ಪಾತ್ರ ಪ್ರಮುಖವಾಗಿರುತ್ತದೆ. ಹಾಗಾಗಿ, ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟ ಕೇಂದ್ರಗಳ ಮೇಲೆ ದಾಳಿ ನಡೆಸಿ ಈಗಾಗಲೇ ಸಾವಿರಾರು ಪ್ರಕರಣಗಳು ದಾಖಲಾದರೂ ಮತ್ತಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕಿದೆ.

» ಒಟ್ಟು 5,811 ಹುದ್ದೆಗಳ ಪೈಕಿ 4,102 ಭರ್ತಿ

» ಅಕ್ರಮ ಮದ್ಯ ತಡೆಗೆ ಸಿಬ್ಬಂದಿ ಅಗತ್ಯ

**ಖಾಲಿ ಹುದ್ದೆಗಳ ವಿವರ:** ಅಬಕಾರಿ ಹೆಚ್ಚುವರಿ ಆಯುಕ್ತ-1, ಅಬಕಾರಿ ಜಂಟಿ ನಿರ್ದೇಶಕ-5, ಅಬಕಾರಿ ಉಪ ಆಯುಕ್ತ (ಆಡಳಿತ) -1, ಉಪ ಆಯುಕ್ತ-7, ಅಬಕಾರಿ ಅಧೀಕ್ಷಕ-40, ಉಪ ಅಧೀಕ್ಷಕ-38, ಹಿರಿಯ ರಸಾಯನಶಾಸ್ತ್ರಜ್ಞ-1, ಸಹಾಯಕ ಖಾತೆ ಅಧಿಕಾರಿ-2, ಕಿರಿಯ ರಸಾಯನಶಾಸ್ತ್ರಜ್ಞ-2, ಲ್ಯಾಬ್ ಸಹಾಯಕ-2, ಕಚೇರಿ ಅಧೀಕ್ಷಕ-26, ಅಬಕಾರಿ ಇನ್ಸ್ಪೆಕ್ಟರ್-64, ಅಬಕಾರಿ ಸಬ್ ಇನ್ಸ್ಪೆಕ್ಟರ್ - 306, ಪ್ರಥಮ ದರ್ಜೆ ಸಹಾಯಕ-107, ಸ್ಟೆನೋಗ್ರಾಫರ್-31, ದ್ವಿತೀಯ ದರ್ಜೆ ಸಹಾಯಕ - 129, ಬೆರಳಚ್ಚುಗಾರ-45, ಅಬಕಾರಿ ಮುಖ್ಯಪೇದೆ-358, ಅಬಕಾರಿ ಪೇದೆ-348, ಹಿರಿಯ ಚಾಲಕ -14, ಚಾಲಕ-147 ಹಾಗೂ ಗ್ರೂಪ್ ಡಿ-37 ಹುದ್ದೆಗಳು.